**ಅಧಿಕ ಸಿವಿಲ್ ನ್ಯಾಯಾಧೀಶರು  ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು**

**ಸಿ. ಸಿ. ನಂಃ 131/2025**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಸುಮಂತ್ | ದಿನಾಂಕ | ಃ 19.06.2026 |
| ಗಂಡನ ಹೆಸರು | ಃ ಚನ್ನಕೇಶ | ಸಿ ಡಬ್ಲ್ಯೂ | ಃ 3 |
| ವಯಸ್ಸು | ಃ 24 ವರ್ಷ | ಪಿ ಡಬ್ಲ್ಯೂ | ಃ 3 |
| ಉದ್ಯೋಗ | ಃ ವ್ಯವಸಾಯ | | |
| ವಿಳಾಸ | ಃ ತಾತನಹಳ್ಳಿ ಗ್ರಾಮ | | |

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ಸಾಕ್ಷಿಗೆ ಕೃತ್ಯ ಸ್ಥಳ ಮತ್ತು ಅಮಾನತ್ತು ಮಹಜರನ್ನು ತೋರಿಸಿದ್ದು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು  ನೋಡಿ ಗುರುತಿಸಿದ್ದರಿಂದ ಸದರಿ ಕೃತ್ಯ ಸ್ಥಳ ಮತ್ತು ಅಮಾನತ್ತು ಮಹಜರನ್ನು ನಿಪಿ.3, ಅದರಿಲ್ಲಿರುವ ಸಾಕ್ಷಿಯಸಹಿಯನ್ನು ನಿಪಿ.3(ಎ). ನಿಪಿ.3 ಅನ್ನು ಯಾವಾಗ, ಯಾವ ಸ್ಥಳದಲ್ಲಿ ನಿಪಿ.3 ಕ್ಕೆ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ನಿಪಿ.3 ರಲ್ಲಿರುವ ಸಂಗತಿ ನನಗೆ ಗೊತಿತಲ್ಲ. ನನ್ನ ಸಮಕ್ಷಮ ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ .

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ, ಪರಿಶೀಲಿಸಿ ಅನುಮತಿ ನೀಡಲಾಯಿತು)**

ಪಾಟೀ ಸವಾಲುಃ ಎಪಿಪಿಯವರಿಂದಃ

ದಿಃ 23.12.2024 ರಂದು ಅಪಘಾತ ಸ್ಥಳದಲ್ಲಿ ಅಪಘಾತಕ್ಕಿಡಾದ ಕೆಎ-19-ಇಇ-4423 ದ್ವಿಚಕ್ರ ವಾಹನವನ್ನು ನನ್ನ ಸಮಕ್ಷಮ ಪೊಲೀಸರು ನಿಪಿ.3 ರಂತೆ ಮಹಜರ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಚಾಸಾ 4, 5 ರವರು ನಿಪಿ.3 ಅನ್ನು ಬರೆಯುವ ಕಾಲಕ್ಕೆ ಸ್ಥಳದಲ್ಲಿ ಹಾಜರಿದ್ದು ಅಪಘಾತ ಸ್ಥಳದಲ್ಲಿ ಅಪಘಾತವಾಗಿರುತ್ತದೆ ಎಂದು ಪೊಲೀಸರಿಗೆ ತೋರಿಸಿದ್ದು ನಿಪಿ.3 ಅನ್ನು ಮದ್ಯಾಹ್ನ 1-2 ಗಂಟೆವರೆಗೆ ಬರೆದಿರುತ್ತಾರೆಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇಲ್ಲ ಃ

CC No.131/2025
Dt.19.06.2026

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸ.ಇದೆ.**

**ಅಧಿಕ ಜೆಎಂಎಫ್‌ಸಿ, ಅರಕಲಗೂಡು.**